ಮುಂಬೆಳಗು



ಅ. ಕ. ಸಂಕಪ್ಪ ರೈ.

೧೯೪೭

ಪ್ರಕಾಶಕರು:

ಬಾಳಿಗ ಎಂಡ್ ಸನ್ಸ್,

ರಥಬೀದಿ, ಮಂಗಳೂರು.

Price: 0—12—0. ಬೆಲೆ: ೦—೧೨—೦

ಮುಂಬೆಳಗು

ಅ. ಕ. ಸಂಕಪ್ಪ ರೈ.

ಪ್ರಕಾಶಕರು:

ಬಾಳಿಗ ಎಂಡ್ ಸನ್ಸ್,

ರಥಬೀದಿ, ಮಂಗಳೂರು.

Price: 0—8—0. ಬೆಲೆ: ೦—೮—೦

Printed at the
MANGALORE PRESS, MANGALORE
P.I.C.No.S.K.48
Published by
BALIGA & SONS
P.I.C.No.S.K. 38
December 1947

ಮುಡಿಪು

ಬಾಳಬಟ್ಟೆಯಲ್ಲಿ ಮಬ್ಬೊದವಿದಾಗ,
ತಿಳಿವಿನ ಬೆಳಕಿನ ಕೈದೀವಿಗೆಯಿತ್ತು
ಸಲಹಿದ
ಪೂಜ್ಯ ಪಿತೃ
ಅಳಕೆ ಮೋನಪ್ಪ ರೈಗಳು–
ಅವರ ದಿವ್ಯ
ಪಾದಕಮಲಗಳಲ್ಲಿ.

—ಲೇ.

ಪರಿವಿಡಿ

ಮುಂಬೆಳಗು

೧

ಕತ್ತಲೆ ಕಳೆಯಿತು
  ಕರಿದಿನವಡಗಿತು
ಮುಂಬೆಳಗುದಿಸಿತು
      ಮೂಡಲಲಿ!
ಬಾಳಿನ ಬನ್ನದ
  ದುಕ್ಕದ ಕರ್ಮುಗಿ—
ಲೋಡಿದುವಾಗಸ—
      ವನು ಬಿಟ್ಟು!

೨

ಜೀವನಗಗನದ
  ಪೂರ್ವದಿಗಂತವು
ಥಳ ಥಳಗೊಳ್ಳುತ
      ಹೊಳೆಯುತಿದೆ.
ಬಾಲಾದಿತ್ಯನ
  ಚಿನ್ನದ ಕಿರಣಗ—
ಳೆಲ್ಲರ ಕಣ್ಮನ
      ಸೆಳೆಯುತಿವೆ!

೩

ಕೆಚ್ಚೆದೆ ತರುಣರ—
  ನುತ್ಸಹಗೊಳಿಸುತ

ಮಂದಾನಿಲವದೊ
ತೀಡುತಿದೆ.
ಕೋಗಿಲೆ ಕುಕಿಲುವ
ಹಾಡಿನ ಕಾಳ್ಪರ—
ವಾಗಸನೆಲದಲಿ
ಹರಿಯುತಿದೆ.

೪

ದುಸ್ವರ ಸವರುತ
ದುರ್ದಿನವಡಗಲು
ನವೀನ ಸುಖದಿನ
ಮೂಡುತಿದೆ!
ಸೊಬಗಿನ ಸುಗ್ಗಿಯ
ಸುಖ ಹರ್ಷಂಗಳ
ನಾಕವೆ ಲೋಕವಿ—
ದಾಗುತಿದೆ!

೫

ಸಾವಿರ ದೇವರ
ಸಾವಿರ ಮತಗಳ
ಹಿಂದಿನ ದಿವಸಗ—
ಳೋಡುತಿವೆ!
ಒಂದೇ ದೇವರ
ಒಂದೇ ವರ್ಗದ
ಹೊಸದಿನವಿಂದಿದೊ
ಮೂಡುತಿದೆ!

೬

ಭೂಮೀಶ್ವರರನು,
　ಚಕ್ರಾಧಿಪರನು,
ಸಾಮ್ರಾಜ್ಯತ್ವವ
　　　ಸದೆಬಡಿದು!
ದಲಿತರನೆತ್ತುವ
　ಸಮತಾವಾದದ
ಪ್ರಜಾ ಪ್ರಭುತ್ವವು
　　　ರೂಪಿಸಿದೆ!

೭

ಮಾನವರೆಲ್ಲರ
　ಸುಖಾಭಿಲಾಷೆಯು
ನಿಸ್ವಾರ್ಥತೆಯೆಡೆ
　　　ಸಾಗಿಹುದು!
ಸ್ವಾರ್ಥತೆಯುಗಲಿದ,
　ಸುಖ ಸಂಪತ್ತಿನ
ಸೊಬಗಿನ ಮುಂಬೆಳ—
　　　ಗುದಿಸಿಹುದು.

ಹಾಡು

೧

ಹೊಸ ಜೀವ ಹೊಸ ಭಾವಗಳನರಳಿಸುವ ಹಾಡ ಹೆಣೆಯಬೇಕು!
ನವನವೋನ್ಮೇಷಶಾಲಿನಿಯಾಗಿ ಕಾವ್ಯವೆಣ್ ಮೆರೆಯಬೇಕು!
ಮಾನಿಸರ ಪಂದೆದೆಯನಿರಿವಂಥ ಹಾಡ ಕಟ್ಟಬೇಕು!
ಕೆಚ್ಚಿಲ್ಲದವನೆದೆಯ ಶೌರಿಯದಿ ತುಂಬಬೇಕು!
ಬಾಳಿನಲಿಮುಬ್ಬೊದವಲದ ಹರಿಪಶಕ್ತಿ ಹಾಡಿಂಗೆ ಬೇಕು!
ದಾರಿಗಾಣದೆ ನೊಂದು ಮುಂಬರಿಯಲಾರದಗೆ ಪಥದೋರಬೇಕು!
ದಿಟ ಹುಸಿಯ ಬಲೆಯೊಳಗೆ ಸಿಕ್ಕ ಮಂದಿಯನೆತ್ತಿ
ಸತ್ಯ ಧರ್ಮದ ನೆಲೆಯ ನಿರ್ದೇಶಿಸುವ ಹಾಡ ಹೆಣೆಯಬೇಕು!
ಬಡ ಜನರ ಹಿಂಸಿಸುವ ಸ್ವಾರ್ಥಿಗಳ ತಲೆ ಮೆಟ್ಟಿ
ದ್ರೋಹಿಗಳ ರಕ್ತಮಾಂಸಗಳಿಂದ ನವಯುಗವ ಸೃಷ್ಟಿಸಲು
ಕ್ರಾಂತಿಕಾರಕವಾದ ಹೊಸ ಹಾಡ ಹೊಸೆಯಬೇಕು!
ಹುಟ್ಟು ಸಾವುಗಳನ್ನು ಲೆಕ್ಕಕೆಣಿಸದೆ ಮುಂದೆ
ಬಾಳ ಮುನ್ನೀರಿನಲಿ ಧುಮುಕಿಸುವ ಕವನಗಳ ಕಟ್ಟಬೇಕು!
ದುಃಖ ಸಂಕಷ್ಟಗಳ ಬದಿಗೊತ್ತಿ ಮುಂಮುಂದೆ,
ಧೈರ್ಯದಿಂದೆದುರಾಗೆ ಪ್ರೇರಿಸುವ ಹಾಡುಗಳ ಕಟ್ಟಬೇಕು!

೨

ಬನ್ನಿರೈ, ತರುಣ ತರುಣಿಯರೆಲ್ಲರೊಟ್ಟಾಗಿ,
ಹೊಸ ಬಾಳ, ಹೊಸ ಹಾಡ, ಹಾಡ ಬನ್ನ
ಸಿರಿವಂತ ಘಾತುಕರು ಮೋಸದಲಿ ನಾಡ, ಕೈಯೊಳಗಿರಿಸಿ,
ಶಿರ ಕೊಯ್ಯುತಿಹರಯ್ಯೊ, ಸಜ್ಜನರ ಹಳಿತನದ ಸೋಗಿನಿಂದ!

ಅನ್ನೆಯವನೊಳಗಿರಿಸಿ, ಮರೆಗೊಂಡ ಗೋಮುಖ ವ್ಯಾಘ್ರಗಳ
ಮೋಸ ಮುಸುಕನು ಕಿತ್ತು ದೌಷ್ಟ್ಯವನು ತೊಲಗಿಸಿಲ್ಲಿಂದ!
ಸತ್ಯ ಧರ್ಮವನುಳಿಸೆ, ಬಡ ಜನರನುದ್ಧರಿಸೆ,
ಒಗ್ಗಟ್ಟಿನೊಮ್ಮನದಿ ಮುಂದರಿಯಲೆದುರಿಸುವರಿಲ್ಲ!
ಹಳಗಾಲದಜ್ಞಾನ ತಮವದೋ ಸರಿಯುತಿದೆ!
ಹೊಸಗಾಲದಾನಂದ ಪ್ರಭೆಯದೋ ಬೆಳಗುತ್ತಿದೆ!
ಓ ಬನ್ನಿ, ಕೆಚ್ಚೆದೆಯ ತರುಣ ತರುಣಿಯರೆಲ್ಲ
ಕೊಳಕು ದಿನಗಳ ತೊಡೆದು, ನವ ಯುಗವ ಸೃಷ್ಟಿಸಲಿಕೆ!
ಸಾವೊಡಿದು ಈ ದೇಹ,—ಬೆದರದಿರಿ, ಬಾಳು ದಿಟವಲ್ಲ!
ಆತ್ಮಕಿಲ್ಲೈ ಸಾವು! ಈ ದೇಹ ಬರೆ ಮಾಯೆ! ಬನ್ನಿರೆಲ್ಲಾ!

ಕ್ರಾಂತಿ ಗೀತ

೧

ಓ ವೀರ! ಕದನಕಲಿ! ಕಟ್ಬಾಳು!
ನಡೆ ಮುಂದೆ ಮುಂದೆ!
ಹುರುಪು ಹುಮ್ಮಸದಿಂದ
ಬವರ ಭೂಮಿಗೆ ಸಾಗು
ಧೃಡಗೊಂಡು ವೇಗದಿಂದ!

೨

ಸಂದೇಹವನು ಬಿಟ್ಟು ಮುಂದೆ ನಡೆ,
ಕಾಳೆಗಕೆ ಸಾಗು!
ತುಮುಲ ಘರ್ಷಣೆಗಳಲಿ,
ಕೆಚ್ಚಿಂದ ಮುನ್ನಡೆದ
ಬೀರರಿಗೆ ಗೆಲವು ನಿತ್ಯ!

೩

ಬೆದರದಿರು, ವೀರನಿಂ, ವೀರರ್ಗೆ
ಬೆದರೆಂಬುದಿಲ್ಲ !
ಬಾಳ ಬನ್ನಗಳೆಲ್ಲ!
ಗುಡುಗುತಿಹ ಸಿಡಿಲ ವೋ
ಡಗಳೆಲ್ಲ ಚದರುತಿಹವು!

೪

ವೀರನಿಗೆ ಪ್ರೇಮ ವೈರಗಳಿಲ್ಲ!
ನಗೆ, ದುಗುಡವಿಲ್ಲ!

ತರುಣರಿಗೆ, ಬೆದರು ಬೇ–
ನೆಗಳಿಲ್ಲ ಬಳಲಿಲ್ಲ!
ವೀರನೀಂ ನಡೆಯೊ ಮುಂದೆ

೫

ಸುಖ, ಶಾಂತಿ, ಸಂತೋಷಗಳು ಎಲ್ಲ
ಕಷ್ಟಗಳ ಹಿಂದೆ––
ಹುದುಗಿಹವು ಮರೆಗೊಂಡು!
ದಡ್ಡಿಯನು ಹರಿದೊಗೆದು
ಒಳ ಧುಮುಕು ವೀರ ಮುಂದೆ!

೬

ಹೊಸ ದಿನದ ಕ್ರಾಂತಿತೂರ್ಯಧ್ವಾನ,
ರುಂದ್ರ ಧ್ವನಿಗೊಂಡು
ಮೊಳಗುತಿದೆ ವಿಶ್ವವನೆ!
ವೀರ ಕಹಳೆಯ ಧ್ವನಿಯು
ವೀರ ಜನರೆಲ್ಲ ಕೇಳಿ

೭

ಸ್ವಾತಂತ್ರ್ಯ, ಸಮತೆ, ಶಾಂತಿಗಳಿಂಗೆ
ಭಂಗತರುವಂಥ
ಮಂದಿಗಳ, ಮಾರಿಗಳ
ವೀರನೀಂ ಕೆಡೆದು ಹಾಕು!
'ಮೇಲು ಕೀಳುಗಳಿಲ್ಲ
ಭೇದವೆಮ್ಮೊಳಗಿಲ್ಲ!'
ಎಂದು ಹಾಡುತ್ತ ನಡೆ ವೀರ!
ಮುಂದೆ ನಡೆ! ನಗುತ ಧೀರ!

ತುಳುನಾಡಿನೊಡತಿ

ಗಿಳಿಯು ಗಳಪುತಲಿತ್ತು, ಪಿಕವು ಕುಕಿಲುತಲಿತ್ತು
ವಾಯು ಬೀಸುತಲಿತ್ತು! ಸುತ್ತೆಲ್ಲ ಚೆಲುವು ತುಂಬಿತ್ತು!
ಕರುನಾಡು! ಕಬ್ಬಿಗರ ನೆಲೆವೀಡು! ಚೆಲುನಾಡು!
ನೋಟಕರ ಕಂಗಳಿಗೆ ಹಬ್ಬವಾಗಿತ್ತು!

ಹೊಲದೊಳೊಬ್ಬಳು ಹೆಣ್ಣು, ಹರಕು ಚಿಂದಿಯನುಟ್ಟು
ಗೈಯುತಿಹಳೊಬ್ಬಳೇ ಕಟಿಗೆ ಕೈಗೊಟ್ಟು!
ಪಾಡ್ದನದ ಸವಿಯಿಲ್ಲ! ಸೊಗಸು ಹಾಡುಗಳಿಲ್ಲ!
ಸುಗ್ಗಿಗಾಲದೊಳಿಂತು ಪೈರನೊಟ್ಟಿಪೆನೆಂಬ ಹರಿಸವಿಲ್ಲ!
'ಕಮಲಮುಖಿ' 'ವಿಮಲಗುಣಿ' 'ತುಳುನಾಡಿನಮಲಮಣಿ'
'ಚೆಲುವುಕ್ಕಿ ಹರಿಯುತಿಹೆ, ಭಾವುಕರ ಹೃದಯ ಖನಿ'
ಮೆಯ್ಯಲ್ಲಿ ರಕ್ತವೊಂದಿನಿಸಿಲ್ಲ! ಚೆಲುವಿಲ್ಲ!
ಮುಖದಲ್ಲಿ ನಗುವಿಲ್ಲ! ಬಾಳೊಳುತ್ಸಾಹವಿಲ್ಲ!

ಹೊಲದ ಹೊರಭಾಗದೊಳು ಮಕ್ಕಳೀರ್ವರು ಕೂಡಿ,
ಗೋಳೆಂದು ಕೂಗುತಿವೆ!—'ಅಮ್ಮನೀ ಬಾರೆ'ಂದು
'ಹಸಿವಿನಲಿ ಬಳಲುತಿಹೆವೆಮಗೆ ಮೊಲೆಯೂಡಿಸೆಂದು'
ಹಸಿವಿನಿಂದಳಲುತಿಹ ಮಕ್ಕಳನು 'ಹಾ! ಮಕ್ಕಳಿರ, ನಿಲ್ಲಿ
ಬಂದೆನಿದೊ, ಬಂದೆನಾ'ನೆಂದೋಡಿ ಎಂದವರುಗಳನೆತ್ತಿ
ತಲೆಯ ಚುಂಬಿಸಿ ಮೆಲ್ಲ, ಮೊಲೆಯನೂಡಿಸುತಿಹಳು
ಸುರಿವ ಕಣ್ಣೀರಿನೊಡನೆ. ಮಕ್ಕಳದೊ ಕೂಗುತಿವೆ.
ಮೊಲೆಯುಂಡು ಮರುಗುತಿವೆ! ಹಾಲಿಲ್ಲದಾ ಮೊಲೆಯು
ನೈರಾಶ್ಯಭಾವವಲಿ ಚೀಪುತಿವೆ, ಹಸಿದ ಕಿರುಮರಿಗಳು!

‘ಮಕ್ಕಳಿರ, ಅಳಲದಿರಿ! ಹಸಿವನಿಂಗಿಪೆ ನಿಮ್ಮ!
ಬನ್ನಿ ನೀವ್ ಮನೆಗೆ’ಂದು, ಹರಕು ಗುಡಿಸಲಿಗೈದಿ,
ಬಡತನವನಿತ್ತುದಕೆ ಹಣೆಬರಹವನು ಹಳಿದು
ಒಡೆದ ಮಡಕೆಯೊಳುಳಿದ, ತಟಕು ತಿಳಿಯನ್ನೆತ್ತಿ
ಮಕ್ಕಳನು ಬಳಿ ಕರೆದು, ಬಾಯ್ಗೆ ಮೆಲ್ಲನೆ ಹೊಯ್ದು
‘ಅಳಲದಿರಿ ಮಕ್ಕಳಿರ! ಆಡಿ ನೀವಿಲ್ಲಿ’ಂದು
ಮನದಿ ಮರುಗುತ ಮೆಲ್ಲನುಕ್ಕುತಿಹದುಕ್ಕದಿಂ—
ದಣಿಯಿಟ್ಟು ‘ಧನಿ’ಯ ದರ್ಪಕೆ ಸೋತು ಬೆದಬೆದರಿ,
ಹೊಲಕೆಯ್ದುವಳು ಹೆಣ್ಣು! ‘ಮುಗಿಯದಿಹ ಬಾಳ’ ಸಾಗಿಸಲು.

ಹಗಲುಗನಸು

ಎಳೆತನದ ಸೊಗಸೊಪ್ನಗಳೆ ಬನ್ನಿ ಕೈಗೂಡಿ.
ಕಷ್ಟಸಂಕಷ್ಟಗಳ, ಕರಿದಿನದ ಮಬ್ಬನೀಡಾಡಿ!
ಕನಸುಗಳು ನೆನಸಾಗಿ, ಸ್ವರ್ಣದಿನ ಮೂಡಿ
ಭಾವನಾಮಯ ಬಾಳು! ಹರಿಸವನು ನೀಡಿ!

ದಿನದಿನಂ, ಬಾಳು ಮುಂದ್ಯೆದುತಿದೆ ವೇಗದಿಂದ!
ಕನಸುಗಳು ಹಾರುತಿವೆ ಕಾಲದಾಚೆಗು ಮೀರಿ, ರಭಸದಿಂದ!
ಜವ್ವನಂ! ಸೊಗಸು ಸುಖಗಳ ಸಮಯ,
ವಿಶ್ವವನೆ ತೋಳತೆಕ್ಕೆಯೊಳಿರಿಸಿ, ನಭವೇರಿ ಮೆರೆವ ಸಮಯ

ಸೊಗವುಕ್ಕಿ ಹರಿಯುತಿಹ ಗುಣಗಾತಿ ಹೆಣ್ಣೊಬ್ಬಳನ್ನು ಕೈಹಿಡಿದು
'ಕೆಳದಿ ಬಾ, ದುಮುಕೋಣ, ಬಾಳಮುನ್ನೀರಿಂಗೆ, ಧೈರ್‍ಯಪಡೆದು!
ಮುಂದೆ ಮೂಡಲಿಕಿಹವು ಹೊನ್ನದಿನ, ಹೊಂಬಣ್ಣಗೊಂಡು!
ಬಾಳೆಲ್ಲ ಸುಖಮಯಂ!–ಬಾ ನಲ್ಲೆ, ತೆರಳೋಣ–ಮುದವ
ಗೊಂಡು:—

ಹೊಸ ಜೀವ, ಹೊಸ ಭಾವ ತಳೆದು ನಗುಮುಖದಿಂದ
ಕೆಡುಕು ದಿನಗಳ ತೊಡೆದು ಹೊಸ ಸಮಾಜವ ಕಟ್ಟುವುದಕೆ!
ವಿಘ್ನಕಾರಿಗಳನ್ನು ಸಂಹರಿಸಿ, ಕೆಚ್ಚೆದೆ–
ಯಿಂದ ನಾನ್ ಮುಂದೆ ತೆರಳುವ ಬಾರೆ,–ನವಯುಗವ
ಮೂಡಿಪುದಕೆ!

ಬಾಳೊಳೆದುರ್‍ಯೆತರುವ ಕಷ್ಟಗಳ ಕಗ್ಗಟ್ಟ ಮುರಿದು
ತೆರಳುವೆವು! ಭುಜಕೆ ಭುಜಕೊಟ್ಟು ಸತಿಪತಿಯರುಲಿದು!
ಏನು ಚೆಲುವಿನ ನಾಡು! ಹೊಸರೂಪದಿಂದ ತೊಳಗುವ ಬೀಡು!
ವಿಶ್ವಕೇ ಆದರ್ಶ ನಾವೆಲ್ಲರೊಟ್ಟಾಗಿ ದುಡಿದ ನಾಡು!

ನಮ್ಮ ನಾಡೊಳಗಿಲ್ಲ ಬಡವ ಬಲ್ಲಿದರೆಂಬ ಭೇದಗಳು!
ಬಡ ಜನರ ನೆತ್ತರನು ಹೀರಿ ಹರುಷಿಸುವ ಸ್ವಾರ್ಥಾಭಿಲಾಷಿಗಳು !
ಜಾತಿಭೇದಗಳಿಲ್ಲ! ಧರ್ಮ ಪಂಥಗಳಿಲ್ಲ!
'ನಾವೆಲ್ಲರೊಂದೆ' ಎನ್ನುವ ಭಾವ ನಾಡೊಳಿಲ್ಲ!

ಚೆಲುವಿನಿಂ ಸಾಗುತಿದೆ ಬಾಳದೋಣಿ
ಧೈರ್ಯದಿಂದರಿಗಳನು ಎದುರಿಸಲು ಇಲ್ಲ ಹಾನಿ!
ಮಾನಿಸನೆ ದೇವತೆಯು ಕರ್ಮವೇ ಗುಣಕೆ ಕಾರಣವು!
ಸಗ್ಗವಿದು ಭೂಲೋಕ–ತುಂಬಿ ಸುಖಸಂಪದವು!

ಹಲಗಾಲದಿಂದ ಹುಡುಕುತಲಿದ್ದೆ ಸತ್ಯವನು!
ಕಂಡೆ ದಿಟವನು ನಾನು!–ಎನ್ನೊಳೇ ಹುದುಗಿತ್ತು
ಹೊರಗೆ ಹುಡುಕಿದೆನು!
ತಂದೆತಾಯ್ಗಳ ಕೂಡೆ–ನಾಡುಗರು, ಬಂಧುಬಳಗದ ನಡುವೆ
ಬೇನೆ ಬೇಸರಹರಿಪ–ನಲ್ಲೆಯೊಡ ಸಾಗುತಿದೆ ಬಾಳು!

ಹೃದಯದೊಳಗೆ

೧

ಎನ್ನ ಮನದೊಳವಿತುಕೊಂಡ
ಭಾವನೆಗಳ, ಮುಸುಕಿನಲ್ಲಿ
ಮರೆಸಲಾರೆ,—ಹೃದಯವನ್ನೆ
ಬಗಿದು ತೋರ್ಪೆನು!
ಹೃದಯದೊಳಗೆ ಸ್ವಾರ್ಥಭಾವ
ವಿರಿಸಿ, ಹೊರಗಿನಿಂದ ಯೋಗ್ಯ—
ನಂತೆ ತೋರಲಾರೆ ಬಾಗಿ—
ಲನ್ನೆ ತೆರೆವೆನು!

೨

ಮೆತ್ತಗಾದ ಹೃದಯವಹುದು
ವೈರಿಗಳಲಿ— ಹೆಮ್ಮೆಗೊಳಲಿ,
ಗರ್ವವಿರಲಿ, ಹೃದಯವೇಕೊ
ಸಂತಯಿಸುವುದು!
ಒಮ್ಮೆ ಕಂಡ ಮುನಿಸು ಮಾಸಿ,
ಪ್ರೇಮಭಾವವವರ ಮೇಲೆ,
ತೋರುತಿಹುದು!—ಮುನಿಸಿದುದಕೆ
ಮನವೆ ನೋವುದು!

೩

ಭಾವನೆಗಳು ಬಾಳು ತುಂಬ!
ಆಗಸವನೆ ಹಾರಲೇನು?
ಭೂಮಿಯನ್ನೆ ಸುತ್ತು ಬರಲಿ—
ಕಿಚ್ಚಿಗೈವೆನು!

ವೀರನಂತೆ ಶೂರತನದಿ
ಬಾಳಬವರದಲ್ಲಿ ಗೆಲ್ದು
ವಿಜಯಸಿರಿಯ ನೊಲಿಯುಲಾಸೆ
ಹಾರುತಿರುವುದು!

ತ್ಯಾಗಿಯಾಗಿ ನಾಡಕರೆಗೆ
ದನಿಯನಿತ್ತು—ಬಡವರುಗಳ
ಕಾಯ್ದೆನೇನೊ? ಸ್ವಾರ್ಥಿಗಳನು
ದೂರಕಿರಿಸಲೇ!

ಬಿಜ್ಜೆಯರಿಯದಂಥ ಜನರ
ತಪ್ಪುದಾರಿಯಿಂದ ಸರಿಸಿ,
ಮುಂದಕೈದೆ.ಜನರಿಗಾಗಿ
ಸೇವೆಗೈಯಲೆ?

ನಾಡ ನುಡಿಯ ಸೇವೆಗೈದು
ಕ್ರಾಂತಿಗೈದು ಬಾಸೆಯಲ್ಲಿ
ನಾಡ ನುಡಿಯ ನವ ವಿಧಾತ
ನಾಗಿ ಮೆರೆವೆನೊ?

ಸಂಪ್ರದಾಯ ವಾದಿಗಳನು,
ಪ್ರಗತಿಶೀಲ ಸಾಹಿತಿಗಳ
ಕಾಳೆಗವನು ಶಾಂತಿಗೈದು
ಹರಿಸವಡುವೆನೊ!

ನಾಡಸೇವೆ! ನುಡಿಯ ಸೇವೆ!
ಹುಚ್ಚು ಕನಸು! ಕೀರ್ತಿಯಾಸೆ!
ನ್ಯಾಯದಿಂದ, ಹರಿಸಗೊಂಡು
ಬಾಳ ಸಾಗಿಪೆ!

ತಂದೆತಾಯ್ಗಳೊಟ್ಟು ಕೂಡಿ
ಹರಿಸದಿಂದ ನಕ್ಕು ನಲಿದು

ಸೊಗಸುಗಾತಿ ನಲ್ಲೆಯೊಡನೆ
ಕನಸು ಕಟ್ಟುವೆ!

೪

ದೇವನಿಹನೆ? ಪ್ರಶ್ನಿಸುವೆನು
ಸತ್ಯಕಿಲ್ಲ ಗೆಲವು ಜಗದಿ,
ಮಿಥ್ಯೆಯಹಹ! ಲೋಕವನ್ನೆ
ಆಳುತಿರುವುದು!
ಪ್ರಕೃತಿನಿಯಮದಿಂದ ವಿಶ್ವ
ಸಾಗುತಿಹುದು!—ಸತ್ಯವೇನೊ?
ಮಿಥ್ಯೆಯೇನೊ? ಏಕೊ? ಏನೊ?
ಸಾಗುತಿರುವುದು!
ಧರ್ಮಶಾಸ್ತ್ರಗಳನು ಹಿಡಿದು
ತತ್ವಗಳನು ಪೇಳ್ವ ಮಂದಿ
ದಲಿತರುಗಳ ಶಿರವಕ್ಕೊವ—
ರೇನು ಧರ್ಮವೊ?
ದೇವನಿದ್ದರೇಕೆ ಸೃಷ್ಟಿ
ಗೈದನಂತೆ?—ಕಷ್ಟ ದುಃಖ
ವೇಕೆ ಜಗದಿ, ಮಿಥ್ಯೆಮೋಸ—
ವೇಕೊ ತಿಳಿಯದು!
'ಪೂರ್ವಜನ್ಮ ಕರ್ಮವಂತೆ'
ಗೈದ ಕರ್ಮ ಪಾಪಪುಣ್ಯ—
ಕೆಲ್ಲ ಮೂಲವಾಗಲೇಕೆ?
ಜನಕೆ ಪಾಪವು!
ಸೃಷ್ಟಿಗೈವ ಕಾಲದಲ್ಲಿ
ಜನರುಗಳನು ಒಂದೆ ತೆರದ
ಗುಣದಿ ಸೃಜಿಸಲೇಕೆ ತಾರ—
ತಮ್ಯವಾಯಿತು?

ದೈವವಿರಲಿ, ಶೂನ್ಯವಿರಲಿ
ಮನವನೆನ್ನನಳಲುತುಂಬ—
ಲರ್ತಿಯಿಂದ ದೇವನೀನೆ
ಕಾಯೊ ಎಂಬೆನು!
ತಪ್ಪುದಾರಿ ಹಿಡಿಯಲೆನ್ನ
ಮನವು ದುಮುಕುವಷ್ಟರಲ್ಲಿ
ಏಕೊ ಅರಿಯೆ ದೇವರಿಂಗೆ
ಮನಸು ಮಣಿವುದು!
ಶಕ್ತಿವಂತನಹುದೆ ದೇವ!
ಸಕಲ ವಿಶ್ವವಾಳ್ವ ಶಕ್ತಿ
ಸೃಷ್ಟಿಗೈದ ಚಿತ್ರಶಕ್ತಿ
ರೂಪದೋರದೆ?
ಏನೆ ಇರಲಿ, ಬಳಿವಣಿಗೆಯ
ಬಾಲ್ಯದಲ್ಲಿ ಹುಚ್ಚು ಕವನ
ಕಟ್ಟುತಿಹೆನು—ಬಾರದುಂಟೆ?
ಜ್ಞಾನವೊಂದಿನ!

೫

ಮನವ ತಡೆಯಲಿನ್ನು ಕೂಡ
ತೀರಲಿಲ್ಲ! ಸುಲಭದಿಂದ
ಮೋಸ ಹೋಗಿ, ನಾಚುತಿಹೆನು
ಗೈದ ತಪ್ಪಿಗೆ!
ಮಿಥ್ಯೆಯಾಡ ಬಾರದಂತೆ!
ಸತ್ಯವನ್ನೆ ಆಡಲಿಲ್ಲ
ಮುಂದಕೇನೊ ಸತ್ಯಬಾಳ
ನೂಕಲಾಶಿಪೆ!

ಸೊಗಸುಗಾತಿ ಕನ್ನೆಯುಳನು
  ಕಾಣಲೊಮ್ಮೆ ಹೃದಯವೆನ್ನ
ಸೂರೆಯಾಗಿ, ಹುಚ್ಚನಾಗಿ
        ಹುಚ್ಚು ನೆನೆವೆನು!
ಕೂಡಲೆನ್ನ ಮನಸು ಬೇಗ
  'ತಪ್ಪುದಾರಿ ಹಿಡಿಯಬೇಡ
ಹಾರ ಹಿಡಿದು ಕಾದಿರುವಳು
        ನಲ್ಲೆ' ಎಂಬುದು.
'ನಿನ್ನ ನಂಬಿ ಮುಂದೆ ಬರುವ
  ನಲ್ಲೆಯಳಿಗೆ ದ್ರೋಹ ಬಗೆವೆ—
ಯೇನು? ನೀನೆ'ನುತ್ತ ಮನಸು
        ಸುಸ್ಥಿರಪ್ಪುದು!
ಮುಂದೆ ಹೆಣ್ಣ ಮೊಗವ ಕಾಣ
  ಲಾರೆನೆಂದು ಧೃಢವ ಗೈವೆ
ಹುಚ್ಚನಂತೆ ಹುಚ್ಚು ಗುಣವ
        ತೋರುತಿರುವೆನು!

೬

ಬಾಳೊಳೇಕೊ ಕೆಲವು ಬಾರಿ
  ಬೇಸರಿಸುವೆ! ನಾನು ಗೈದ
ಕಾರ್ಯದಲ್ಲಿ ತಪ್ಪು ನಡೆಯೆ
        ತಿಳಿಯದಾಗಿಹೆ!
ಗೆಳೆಯ ಬಾರ! ಗೆಳತಿ ಬಾರ!
  ಬಾಳಿಗೊಂದು ಊರುಗೋಲ
ಕರದೊಳಿತ್ತು—ದಾರಿಯಲ್ಲಿ
        ದೀಪ ಹಚ್ಚಿಸು!

ಕಷ್ಟ ಬರಲಿ, ದುಃಖ ಬರಲಿ
ವೀರರಂತೆ ಶೂರರಂತೆ,
ನಲಿದು ಕುಣಿದು ಕಷ್ಟ ದುಃಖ
ಗಳನು ಗೆಲ್ಲುವ!
ಹೃದಯದಲ್ಲಿ ಬೇಸರಿಲ್ಲ
ದಡ್ಡಿಯೊಗೆದು, ಹರಿದು ಬಿಸುಟು,
ಹೃದಯವನ್ನೂ ತೆರೆದೆ—ನೋಡು
ಸ್ವಪ್ನ ಮೂರುತಿ!
ನಿನ್ನ ಹೃದಯವೊಗೆದ ಭಾವ—
ನೆಗಳಸುರಿದು, ಮುಂದೆ ತೋರು!
ಹೃದಯಕಿತ್ತು ಹೃದಯವನ್ನು
ಬಾಳ ಸಾಗಿಪ!

ಗಾಂಧಿಜಿಗೆ

ಕತ್ತಲೊಳು ದಾರಿಗಾಣದೆ ನೊಂದು ಬೆಂಡಾದ
ಪಥಿಕನಿಗೆ ಪಥದೋರಿ, ಬೆಳಕಿತ್ತ ಮಾರ್ಗನಿ
ರ್ದೇಶಕನ ದಾರಿಗಂ ಮರೆಯಲುಂಟೆ?
ಹಸಿವು ಬಾಯಾರಿನಿಂ ಕಂಗೆಟ್ಟ ಬಡವನಿಗೆ
ದಿವ್ಯಾಮೃತವನಿತ್ತ ದಾನಿಯಂ ಮರೆವರುಂಟೆ?

ದಾಸ್ಯ ಕತ್ತಲೆಯಲ್ಲಿ ದಾರಿಗಾಣದೆ ನೊಂದು.
ಬಸವಳಿದ ಭಾರತರನುದ್ಧರಿಸಿ, ಸ್ವಾತಂತ್ರ್ಯ
ದೀಪ್ತಿಯಿಂ ಬೆಳಗಿಸಿದ, ತೋಳಗಿಸಿದ ಗಾಂಧಿಯಂ
ಲೋಕವುಳಿದಷ್ಟು ಕಾಲವೂ ಮರೆಯಲುಂಟೆ?

ಜೀವನದ ಕಷ್ಟ ಸಂಕಷ್ಟಗಳನೆಲ್ಲವನು
ಧೈರ್ಯದಿಂದೆದುರಿಸಿದ ವೀರವರ! ಹೇ, ಕರ್ಮ
ಸಂನ್ಯಾಸಿ!---ಅಧಿಕಾರ, ಸ್ವಾರ್ಥಗಳ, ಐಶ್ವರ್ಯ
ಕೀರ್ತಿಗಳೊಳಾಸೆಯಿಡದೆಲ್ಲರಿಗೆ ಬಾಳನೇ
ವಿಾಸಲಿಟ್ಟಿಹ ಗಾಂಧಿ! ನಿನ್ನ ನಾವ್ ಮರೆಯಲುಂಟೆ?

ಕವಿಗಳೆನಿಬರೊ, ಗಾಂಧಿ! ಪೊಗಳಿಹರು ನಿನ್ನನ್ನು
ನಾಡೆಲ್ಲ ಕೈವಾರಗೊಂಡಿಹುದು ನಿನ್ನ ಗುಣ
ನಾಮವಂ! ವಿಶ್ವವೇ ಪೂಜಿಸುತ್ತಿಹುದು ನಿನ್ನ!

ಗಾಂಧಿಗಿದು ಕಿರು ಕಾಣ್ಕೆ
ಕಲ್ಪನೆಯ ಕನಸೊಂದು!
ಕಿರುಗವನವಿದರಲ್ಲಿ ಗಾಂಧಿಯೊಳ್ ನೆಲಸಿದ್ದ
ಊರ್ಮೆ ಹರಿದುಕ್ಕಿ ಹೊರಬಂದು ಪ್ರವಹಿಸಿಹುದು!

ಸ್ವಾತಂತ್ರ್ಯ ದಿನ *

ಗೆಳೆಯ ಗೆಳತಿಯರೆಲ್ಲಿ?....ಬನ್ನಿ ರೋಡುತ್ತ ಬನ್ನಿ
ಅಣ್ಣ ತಂಮ್ಮದಿರನ್ನು, ಅಕ್ಕ ತಂಗಿಯರನ್ನು ಕೂಡಿಕೊಂಡ್ಯೆತನ್ನಿ!
ಬನ್ನಿ!!
ಬಂತಯ್ಯ ಹೊಸ ದಿನವು! ಸುಖ ದಿನವು! ಸಂತೋಷ ದಿನವು!
ಹಾರಿಸಿರಿ ಸಿಡಿಗುಂಡನೇರಿಸಿರಿ ಬಾವುಟವ ಬಿಡುಗಡೆಯ ಬಾನಿನಲ್ಲಿ!
ಬಾನ ತುದಿಯನೇರಿ ನಲಿಯಿರಿ
ಗುಡಿಯ ಹಿಡಿಯುತೆಲ್ಲರೊಟ್ಟು ಕೂಡಿರಿ
ಇನ್ನೂರು ವರ್ಷಗಳ ಕರ್ಮುಗಿಲ್ಮೋಡಗಳು ಸರಿದುವೈ-ಸರಿದುವೆಲ್ಲಾ
ಬಾನೆಂತು ಶುಭ್ರವಿದೆ! ಸ್ವಾತಂತ್ರ್ಯದಭ್ರವಿದೆ! ಬನ್ನಿರೈ ಬನ್ನಿರೆಲ್ಲಾ
ಜನ್ಮ ಭೂಮಿಯ ಬಂಧನವ ಬಿಡಿಸಿಲಿಕೆ ಹೋರಾಡಿ ನಾವು
ಇನ್ನೂರು ವರ್ಷಂಗಳಿಂದ ಸುಖಹರ್ಷವೆಂಬುದನು ಕಂಡಿರುವೆವಿಲ್ಲಾ!
ನಲ್ಲನಲ್ಲೆಯರೊಟ್ಟು ಹೊಸ ವಸನ ತೊಟ್ಟು
ತಂದೆ ಮಕ್ಕಳು, ಅಣ್ಣ ತಮ್ಮಂದಿರೆಲ್ಲ
ನಲಿಯೋಣ ಬನ್ನಿ
ಕುಣಿಯೋಣ ಬನ್ನಿ
ಸ್ವಾತಂತ್ರ್ಯದಮೃತವನು ಹೀರೋಣ ಬನ್ನಿ!
ಹಿಂದು ಮುಸ್ಲಿಮರೆಲ್ಲ-ಬೇರೆ ನಿಂದಿಹರಲ್ಲ!
ಸಂದೇಹವೇಕಿಂತು!-ನಾವೆಲ್ಲರೂ ಒಂದೆ, ಒಂದೆ ತಾಯ್ಮಕ್ಕಳು!
ದೇಶವಿದು ಪಾಲಾಯ್ತು!-ಪಾಲಾದುದೊಂದಾಗಲುಂಟು!
ನಮ್ಮೊಳೇನುಂ ಭೇದಭಾವಗಳಿಲ್ಲ! ಭಿನ್ನತನವಿಲ್ಲ!
ಒಂದೆ ಹೊಲದೊಳಗೆರಡು ಜೋಡೆತ್ತುಗಳ ಹೂಡಿ,
ಒಮ್ಮನದೊಳೊಂದೆ ರಾಗದೊಳಲ್ಲಿ ಪಾಡ್ದನವ ಹಾಡಿ,
ದುಡಿವ ದಲಿತರು ನಾವು! ನಮಗೇಕೆ ಈ ಭೇದ ಮಂತ್ರ!

---

* ಆಗೋಸ್ತು ೧೫ರ ನೆನಪಿಗಾಗಿ ಬರೆದುದು

ಕೈಹಿಡಿದೊಟ್ಟಿಗೆ ಕುಣಿಯುವ ಬನ್ನಿ
ಭುಜಭುಜ ತಾಗಿಸಿ ನಲಿಯುವ ಬನ್ನಿ!
ಅಣ್ಣ ತಮ್ಮಂದಿರೊಮ್ಮೆ ಜಗಳಾಡಿ ಪಾಲಾಗಿ ಹೋಗಿ,
ಕಷ್ಟಬರಲೊಗ್ಗಟ್ಟನೊಂದಾಗಿ ಕಾದುವೆವು ಪರರೊಡನೆ ನೋಡಿ!
ಹೊಸದಿನದ ಹರ್ಷದಭಿಮಾನದಲಿ,
ಕರ್ತವ್ಯಕೊಂದಿನಿಸು ಕೊರತೆಯನು ತರಲಾರೆವು!
ನಮ್ಮಲ್ಲಿ ಧೈರ್ಯ ಸಾಹಸವಿಹವು! ಪಂಥ ಪೌರುಷಗಳು!
ಕೆಚ್ಚೆದೆಯ ತರುಣರೆಲ್ಲರು ನಾವು!
ಬಿಸಿ ನೆತ್ತರುಕ್ಕುತಿಹ ಕ್ರಾಂತಿಕಾರಿಗಳು!
ಧನುರು ಹಿಡಿದು, ಡೋಲು ಬಡಿದು
ರುದ್ರವೀಣೆ ಬಾರಿಸಿ,
ವೀರರಂತೆ ನಮ್ಮ ಗುಡಿಯ ಬಾನಿಗೇರಿಸಿ!
ಭೇದ ತಂತ್ರವ ಹೂಡಿ, ಜಾತಿ ಜಾತಿಗಳೊಳಗೆ
ಬಿಕ್ಕಟ್ಟನೊದವಿಸಿದ ನೀವ್ ನಗುವಿರೇನ್ ಹಿಂದೆ?
ನಿಮ್ಮ ಮಾರಣ ಮಂತ್ರ ತಂತ್ರಗಳನೆಲ್ಲವನು
ಉಚ್ಚಾಟಿಸುವೆನಯ್ಯ ನೋಡಿ ನೀವೆಲ್ಲ! ನಾವ್ ನವತರುಣರು!
ದೊಡ್ಡವರು ಬಡವರೊಳು ಸೆಣಸಾಟ, ಕಡಿದಾಟ!
ನಾಡಕಟ್ಟಿನ ಬಂಧವಿದೇನು ಸಿರಿವಂತರಲ್ಲಿ?
ದಲಿತ, ಶ್ರಮಜೀವಿಗಳನಪ್ಪಳಿಸಿ,
ನಾಡ ಪ್ರಗತಿಯ ಮುರಿವ ತಂತ್ರವಿದೇನ್ ನಿಮ್ಮದು?
ದೊಡ್ಡವರೊ? ಬಲ್ಲಿದರೊ? ಆರೆ ಬಂದರು ಸರಿಯೆ
ಹೊಟ್ಟೆ ಬಟ್ಟೆಗೆ ನಮಗೆ ಕೊರತೆ ಬಾರದ ತನಕ
ಸಿರಿವಂತ ರೌದ್ಧತವ ಮುರಿದೊಗೆದು ಬಿಸುಟು
ಶಾಂತಮಯ ಸಮತಾ ರಾಜ್ಯ ಬಗಿದು
ಕ್ರಾಂತಿಗೀತ ಹಾಡುವ!
ದಿವ್ಯವರ್ಷ ಸುರಿಸುವ!

ಗೆಳೆಯನಿಗೆ

ಗೆಳೆಯ! ನಿನ್ನಯ ಭಾವ ಮೂರುತಿಯೆನ್ನ
ಕಣ್ಣೆದುರು ನಿಂದಿರಲು–ದಿವ್ಯ ಸುಖಗೊಂಡೆರ್ದೆ
ಭಾವನಾಮಯ ಬಾಳು, ರಾಗರಸಮಂಗೊಂಡು
ಹಾಡುಕ್ಕಿ ಹೊರಡುತಿದೆ–ಕಣ್ಣೀರ ಸುರಿಸಿ.

ಜೀವನದೊಳೊಮ್ಮೊಮ್ಮೆ ದುಃಖ ಸಂಕಷ್ಟಗಳ
ಕಾರ್ಮುಗಿಲು ಮುಸುಕಿ ಮುಚ್ಚಿರಲೆನ್ನ
ಬಾಳ ಮಸಿಯಂ ಮರೆಸಿ, ಕೈಗೊಟ್ಟು ಮುನ್ನಡೆಸಿ
ಕೂರ್ಮೆಗೊಂಡೆನ್ನನೆತ್ತಿದ ಮಿತ್ರ!

ಕತ್ತಲೊಳ್ ಕೈದೀಪ ಹಿಡಿದೆನ್ನ ಸಾಗಿಸಿದ ಗುರಿಕಾರ!
ಧರ್ಮ ಸಂಶಯದಿಂದ ಕಂಗೆಟ್ಟ ಕಾಲದಲಿ.
ಬಾಳ ಕಡಲಿನೊಳಾಸೆ ದೋಣಿಯನಿತ್ತು ಸಲಹಿದ ಗುರುವೆ!
ನಿನ್ನಗಿದೊ ಮೀಸಲಿಹುದೆನ್ನ ಬಾಳು!

ಸೊಗಸು ಸಂಪದಗಳಿಂ ಮೆರೆವಂದು
'ಗೆಳೆಯ ಬಾ ಬಳಿಗೆ'ಂದು ಕರೆವವರು ಹಲರಿಹರು!
ಸ್ವಾರ್ಥದಿಂ ಗೆಳೆತನಕೆ ಮೆಯ್ಯೊಡ್ಡುವಂಥ ಮೈತ್ರಿಗೆ ಮುಂದೆ
ನಡೆತಂದು ಹಾಕೈಸಲಚ್ಚರಿಯ ಪಡೆಯಲುಂಟೆ!

ಕ್ಷಣ ಕ್ಷಣಕೆ ಒಡಕು ಭೀತಿಗಳೊಟ್ಟು ಮಾರ್ಮಲೆದು
ಸಿಡಿಲು ಮಿಂಚುಗಳೋಲು ಬೊಬ್ಬಿಡುತ ಗುಡುಗಿಸುವ
ಕಾಲದಲ್ಲಿ 'ಭಯವನುಳಿ, ಮಿತ್ರನೀ'ನೆಂದಭಯವಿತ್ತು
ಬನ್ನ ಸಂಕಷ್ಟಗಳನೆದೆಗೊಟ್ಟು–ಎದುರಿಸಲು
ಮುನ್ನಡೆಯಿಸುವ ಧೀರ! ನಿನ್ನ ಗೆಣೆಯುಂಟೆ?

ಧನಸಾಲವಿತ್ತವಗೆ ಋಣವ ತೀರಿಸಬಹುದು!
ಅನ್ನ ವಸ್ತ್ರಾದಿಗಳನಿತ್ತು ಸಲಹಿ ಕಾಯ್ದವನಿಂಗೆ
ಜನ್ಮಾಂತರದೊಳಾದರೂ ಹಿಂದೆ ಕೊಡಲೆಡೆಯುಂಟು!
ಗೆಳೆಯ!-ನಿನ್ನಯ ಋಣವತೀರ್ಚಲುಂಟೆ?

ನಾನೆಂದರಾರಂತೆ! ನೀನೆಂದರಾರಂತೆ!
ನಾನು ನೀನವನೆಂಬ ಭೇದವನು ಬಿಡಲೆಲ್ಲ
ಬ್ರಹ್ಮಮಯ!— ಈ ತತ್ವದೊಂದೇ ತೃಪ್ತಿ
ಎನ್ನಾತ್ಮಕಾಸರನ್ನೀಯುತಿಹುದು!

ಕೃಷ್ಣಾಷ್ಟಮಿ

ಕೃಷ್ಣಾಷ್ಟಮಿಯದೊ ಬಂದತ್ತು!
ಸುಖ ಸಂತೋಷವ ತಂದತ್ತು!
ಗೋಪೀ ವೃಂದಗಳೊಟ್ಟಿಗೆ ಕೂಡುತ
ಗೋಪಾಲಕನನು ಪೂಜಿಸುತಿಹರು!
ಹರ್ಷಾಧಿಕ್ಯದೊಳುತ್ಸಹಗೊಂಡು,
ನಲಿಯುತ, ಕುಣಿಯುತ, ಹಾಡುತಲಿಹರು!
ಗಂಡಸು, ಹೆಂಗಸು, ಬಾಲಕರೆನ್ನದೆ
ಕೃಷ್ಣ ಪರಮಾತ್ಮನ ಪೂಜಿಸುತಲಿಹರು!
ರಾಕ್ಷಸ ವೃಂದವ ದಸ್ಯುಸಮೂಹವ
ತರಿಯುತ್ತೆಲ್ಲರ ಕಾಯ್ದನನು!
ಆ ಕುರುಕ್ಷೇತ್ರದಿ ಕೌರವರೆಲ್ಲರ
ಯಮಪುರಕಟ್ಟಿದ ವೀರನನು!
ಅನಾಗರಿಕರನು, ಗೊಲ್ಲ ಸಮೂಹವ
ಸಲೆಕಾಪಾಡಿದ ದೇವನನು!
ಕರ್ಮತ್ಯಾಗಿಯು! ಸಕರ್ಮ ಮೂರ್ತಿಯು!
ಮನುಜೋದ್ಧಾರಕ ದೈವವನು!
ಪಾವನ ಮೂರುತಿ ಗೀತಾಚಾರ್ಯನ
ಧರ್ಮೋದ್ಧಾರಕ ಕೃಷ್ಣನನು!
ಓ, ಓ, ಕೃಷ್ಣನೆ ನೀ ಬಾರಯ್ಯ!
ಭೂಲೋಕವನಿಳಿತಾರಯ್ಯ!
ಲೋಕದೊಳನ್ನೆಯ ಪೊದವಲು ಹುಟ್ಟುವ
ಧರ್ಮೋದ್ಧಾರಕ ನೀ ಬಾರಯ್ಯ!
ಸತ್ಯವು ನಶಿಸಿದೆ! ಅಧರ್ಮ ಹೆಚ್ಚಿದೆ!
ಬರದಿಹೆಯೇಕೈ-ಇನ್ನೂ ನೀನು?

ಹಿಂಸಾಚರಣೆಯು ಲೋಕವನೆಲ್ಲಾ
ತುಂಬುತ ಸುಜನರ ಕೆಡಹಿಹುದು!
ಓ, ಓ, ದೇವನೆ, ದೇವರ ದೇವನೆ
ನಮ್ಮಗಳೆಲ್ಲರ ಮರೆತಿಹೆಯೆನು!
ನಿನ್ನಾ ಶಂಖದ ಪ್ರಚಂಡಧ್ವಾನವು
ಸುದರ್ಶನ ಚಕ್ರದ ಸಚ್ಛಕ್ತಿ!
ನಮ್ಮನು ಕಾಯಲುಬೇಕಿಹವಿಂದು!
ಉದಯಿಸಿ ಬಾರೈ ಅವುಗಳ ಕೊಂಡು!
ಸುಜನೋದ್ಧಾರವು ಎಂದಾಗುವುದೋ?
ಕೃಷ್ಣಾಷ್ಟಮಿಯು ಅಂದೇ ನಮಗೆ!
ಸುಖ ಸಂತೋಷಗಳುದಯಿಸಿದಂದೇ
ನಮ್ಮಗಳೆಲ್ಲರ ಕೃಷ್ಣಾಷ್ಟಮಿಯು!

ಕುರುಕ್ಷೇತ್ರದಲ್ಲಿ

ಗದ್ಯ ಗೀತ

(ಹದಿನೆಂಟು ದಿನಗಳ ಕುರುಕ್ಷೇತ್ರದ ಕದನದಲ್ಲಿ ಸಹಸ್ರಾರು ಮಂದಿ ವೀರ ಕ್ಷತ್ರಿಯರು ಅಸುನೀಗಿದರು. ನೂರಾರು ಮಂದಿ ಸಾಧು ಸಜ್ಜನರೂ ಆ ಕದನದಲ್ಲಿ ಬಲಿಯಾಗಿದ್ದಾರೆ, ವ್ಯಾಸ ಋಷಿ ಈ ಭೀಕರ ನಾಶವನ್ನು ಕಂಡು ಸಹಿಸಲಾರದೆ ಏನೇನೊ ಆಡಿಕೊಳ್ಳುತ್ತಿದ್ದಾನೆ. ಇದೊಂದು ಕಲ್ಪನಾ ದೃಶ್ಯ!)

ಕುರುಕ್ಷೇತ್ರ!
ಉಜ್ವಲ ತಪದೊಳಂಬುಜಾಸನನ ಮೆಚ್ಚಿಸಿ
ಮುಕ್ತಿಲೋಕವ ಸೇರ್ದ, ಕುರುವಿನಿಂ ಪೆಸರಾಂತ
ಪವಿತ್ರಂ! ಪವಿತ್ರಮಯ ಕುರುಕ್ಷೇತ್ರ!
ಏನೆಲ್ಲ ಘಟನೆಗಳು?........!
ಈ ಅಮಾನುಷ ಕೃತ್ಯಗಳು!........!
ಒಂದೆ ವಂಶದೊಳುದಿಸಿ, ಬಳೆದು ಬಲಗೊಂಡ
ಓ ಚಂದ್ರ ವಂಶದ ವೀರ ಕ್ಷತ್ರಿಯರ!
ಒಮ್ಮನವನುಳಿಯುತ್ತ ಸೋದರರು
ಕಾದಾಡಿ ಸರ್ವನಾಶವ ಹೊಂದಿದಿರ?
ಎನಿತು ಕಾಲದ ನಿಷ್ಠೆ! ಈ ತಪೋನಿಷ್ಠೆ!
ಎಲ್ಲವೂ ಮಣ್ಣುಗೂಡಿತ್ತೆ? ಮಸಣವಾಯ್ತೆ?
ಮುನಿವರರುಮೆಲ್ಲರುಂ ಒಟ್ಟಾಗಿ,
ಆರ್ಯ ಧರ್ಮ ಸ್ಥಾಪನೆಗೆ ಎನಿತು ಕಾಲವನು
ಸವೆಸಿದೆವು?
ಎಲ್ಲವೂ ನಿಷ್ಫಲ!
ನೀರಮೇಲಣ ಹೋಮ!
ಬಾಯಿಯೊಳತುರುಂಕಿದ ತುತ್ತು ಕೈಯಿಂದ

ಜಾರಿಬಿತ್ತೆ?
ಅನ್ಯಾಯವೆಸಗಲ್ಕೈತಂದ ದಸ್ಯುಗಳ,
ಸವರಿ, ಸಂಹಾರಗೈದ—ಓವೋ ಶ್ರೀಕೃಷ್ಣ!
ಲೋಕಲೋಕದ ಗುರುವೆ!
ವಿಶ್ವವ್ಯಾಪನ ಮೂರ್ತಿ!
ದಸ್ಯುಗಳ ತಡೆಗಟ್ಟಲ್ಕೈತಂದೆಯೇಂ ನೀನು!
ಬಟ್ಟೆ ತಿಳಿಯದೆ ತಪ್ಪಿ,
ತಪ್ಪು ಹಜ್ಜೆಯ ನಿಡುತಲಿದ್ದ—ಆದರ್ಶ ಜನತೆಯನು
ಸೃಷ್ಟಿಸಿದ—ಓ ಮಹಾನುಭಾವಾ,
ಭಾರತವನಿಂತು, ದುರಂತದೊಳ್
ಕೊನೆಗೈವುದೆ?
ಕೌರವರ ಸಂಹಾರದೊಂದೆ ನೆವನದೊ-
ಳೆನಿತು ಸಜ್ಜನರ ಕೊಲೆಯಾಯ್ತು?
ವಿಶ್ವವನೆ ದಂಗುಗೊಳಿಸಿದ ಆರ್ಯ ಸಂಸ್ಕೃತಿಯ
ನಾಶವಾಯ್ತೆ?
ಭರತ ಖಂಡದ ಕೀರ್ತಿ ಧವಲವನ್
ಕಪ್ಪುಮಸಿಮಸಕಿತೆ?
ಧರ್ಮ ಸಂಸ್ಥಾಪಕನ್, ಓ, ಕೃಷ್ಣ
ಭಾರತದ ಪುನರುತ್ಥಾನ ದಿನವೆಂದು
ಮೂಡಲಿದೆ ದೇವ?

(ಸಮಾಧಿಸ್ಥನಾಗುವನು)

ಸಂಜೆಯ ಸೊಬಗು

೧

ಮನವನಳಲು ತುಂಬಿರಲು
ಹೃದಯವೇಕೊ ಭಾರವಿರಲು
ಸುಖ ವಿಹಾರಕೆಂದು
ಕಡಲಿನೆಡೆಗೆ ತೆರಳಿದೆ.

೨

ಸಂಜೆ ಸಮಯವಾಗಸದ
ಪಡುವಿನೊಡಲು ಚೆಲುವುಗೊಂಡು
ನೋಟಕರನು ಭಾವ—
ಲೋಕಕೆಳೆಯುತಿದ್ದಿತು!

೩

ಜಲಧರಗಳು ಹೊಸ ಹೊಸತು
ರೂಪನಾಂತು ಸೊಗಸುಗೊಳಲು
ಕಲಾವಿದನು ಚಿತ್ರ
ಬಿಡಿಸುವಂತೆ ಕಂಡವು.

೪

ಬಲ ವಿಚಿತ್ರವಾಗಿರಲು
ಗಳಿಗೆಗೊಮ್ಮೆ ಮೂಡಿಮುಳುಗಿ.

ನೀರದಗಳು ಚಲ—
ಚ್ಚಿತ್ರದಂತೆ ತೋರ್ದವು!

೫

ಸೂರಿಯನು ಮಳುಗುತಿರಲು
ದೂರ ಬಾನಿನಂಚಿನಲ್ಲಿ
ದಿವ್ಯ ಶಕ್ತಿರೂಪು—
ಗೊಂಡತೆರದೊಳೆಸೆಯಿತು.

೬

ಹರಿಸಗೊಂಡೆರ್ದೆಯುಕ್ಕಿ
ಸೊಗಸುಗೊಂಡ ರೂಪಕಂಡು
ಕಂಗಳಿಂದ ನೀರು—
ಹರಿದು ಕೆಳಗೆ ಸುರಿಯಿತು!

೭

ದೂರ, ದೂರ, ಬಾನಿನೊಳು
ಹಾರುತಿದ್ದ ಶುಕ ಸಮೂಹ
ದೇವರಿಂಗೆ ಹೂವಿ—
ನರ್ಚಿಪಂತೆ ತೋರಿತು!

೮

ಮೋಡದಂಚು ಕಂಗೊಳಿಸೆ
ರಕ್ತವರ್ಣದಿಂದ ಕೂಡಿ,
ದೇವಗಾರತಿಯನು
ಬೆಳಗುವಂತೆ ತೋರಿತು!

೯

ಕ್ಷಣದೊಳಾಗಸದಿ ಹೊಳೆದು
ದಿವ್ಯ ಸುಖದೊಳೆನ್ನವಿರಿಸಿ,
ಸಂಜೆ ಸೊಬಗು ಹುಟ್ಟಿ,
ಬೇಗ ಮಾಯವಾಯಿತು!

೧೦

ಅಂದುಕಂಡ ಸಂಜೆಸಿರಿ
ಮಾಯವಾದರೇನು ಬೇಗ?
ಜೀವನದಲಿ ಸಂತ—
ಸವನು ನೀಡಿತು!

೧೧

ಸುಂದರದ ವಸ್ತು ಸದಾ
ಹರ್ಷವೀವುದೆಂಬ ಮಾತು
ಸತ್ಯವೆಂದು ಹೃದಯ—
ವೆನ್ನ ಖಚಿತಗೊಂಡಿತು!

ಕನ್ನಡ ನಾಡಿನಲ್ಲಿ ಸೂರ್ಯೋದಯ

ಕತ್ತಲೆಯ ಕಾರೊಡ್ಡು ಕಾಲ್ದೆಗೆಯುತಿರಲು,
ಸುತ್ತಲಂ ಸೂರ್ಯರುಚಿ ಬಾನಹಬ್ಬಿರಲು
ಮಂದ ಮಾರುತಮೆಲ್ಲ, ವಾರಿಜವನೆಬ್ಬಿಸುತ್ತ
ಮುಂದೆ ಬೀಸಿದನಿಂತು ಹುರುಪುಗೊಳುತ!

ಕಳಕಂಠ ಕಾಡಿನಲ್ಲಾನಂದದೋರಿ
ಇಳೆಯ ಮೆಚ್ಚುವ ತೆರದಿ ಹಾಡಲದು ಹಾರಿ,
ಗಿಳಿಯಂದು ಗಿರಿಯಂದು ಧರೆಗಿಳಿದು ಬಂದು,
ಗಳಪುತ್ತ ಹಾರಿದುದು ಸುರಪಥಕೆ ಸುತ್ತು ಬಂದು!

ಅಳಿನಿವ ಹವಲರುಗಳನರಸುತ್ತ ಬಂದು
ಜಳಜವರಳದೆ ಕಲಿಕೆ ಬಿರಿವುದನು ಕಂಡು
ಕಮಲದೆಡೆಯುಲಿಸುತ್ತಿ ಚರಿಸಿತಾ ದಂಡು!

ಮನೆಯಲಕುಮಿಯರೆಲ್ಲ ಹಾಸಿಗೆಯ ಬಿಟ್ಟು
ಬನದಿಂದ ಕೇಳುತಿಹ ದನಿಗೆ ಕಿವಿಗೊಟ್ಟು
ಕನಸ ಕಾಣುವರಂತೆ ಬೆಪ್ಪಾವರಂತು!

ಸೃಷ್ಟಿ ಮಾತೆಯ ಸೊಬಗ ಬಿತ್ತರಿದೆನೆಂತು?
ಎಷ್ಟು ವಿಧದಲಿ ಪೊಗಳಲು ಸಾಲದಿಂತು!
ಕನ್ನಡಮ್ಮನ ಸೊಬಗ ಬಿತ್ತರಿಪೆನೆಂತು?
ಜನ್ಸರ್ವರು ಹೊಗಳಿತೀರದ ಸೊಬಗ ನಾಹೇಳಬೇಕೆ!

ಮಂದ ಮಾರುತ ಬೀಸೆ,-ಸುಖಸ್ಪರ್ಶವಾಗೆ
ಚಂದನದ ಗಂಧ ನಾಲ್ದೆಸೆಗಳಲ್ಲಿ ಹಬ್ಬಿತಾಗ!

ಕಡಲ ತೆರೆ ಪಶ್ಚಿಮಾಂಬುಧಿಯಿಂದಲೆದ್ದು
ತೆರೆಗಳಿಂ–ನಡುಕದಿಂದಾನೇಸರಡಿಗೆ ಬಿದ್ದು—
ಕನ್ನಡರ ಕರೆಯುತಿದೆ ಪ್ರಾರ್ಥನೆಯುಗೊಂಡು!

'ಕನ್ನಡರ ಜೀವನಾಕಾಶದಲ್ಲಿ ಭಾನು,
ಬನ್ನಿಗೆಳೆಯರೆ–ನೋಡಿ ಬೆಳಗುತಿಹ, ತಾನು!
ಕುನ್ನಿಗಳ ಕುತ್ತುತ್ತ ಕನ್ನಡವನೆತ್ತುತ್ತ
ಮುನ್ನಡೆವ ಪ್ರಗತಿಪರರುಗಳೊಡನೆ ತೆರಳಿ'ರೆನುತ

ಚೈತ್ರಾಗಮನ

ಕಳೆಯೆ ಶಿಶಿರಮಾಸ, ಮೋದ
ವಿಳೆಯ ಬಹಳ ಭಾಗದಲ್ಲಿ,
ತಳೆಯೆ,—ಚೈತ್ರ ತೋರ್ದುತೋಷ
ಗೊಳುತ ವಾಯು ದೇವನೊಡನೆ
ಕೂಡಿ, ಗಂಧ ಚಂದನಗಳ
ಪೂಸಿ,–ತೇಜಿಯಾಗಲಸುಗೆ
ಮರವು, ಮಾಮರಂಗಳಾಗೆ
ರಥವು, ಪಕ್ಷಿನಿಚಯ ಹೊಗಳು
ತಿರಲು, ಚಾಮರವನು ಮಂದ–
ಮಾರುತ ಬೀಸುತಿರಲು ಮಾರ–
ನನ್ನು ನಗಿಸಿ, ನಲಿಸಿ ಭೂರಿ
ವಿಭವದಿಂದ ಬಂದ ಚೈತ್ರನು!
ಬವರ ದಂಡು ಝೇಂಕರಿಸಲು
ಕೋಗಿಲೆಗಳು ಹಾಡುತಿರಲು
ಶುಕ ಸಮೂಹಗಳವುತಿರಲು
ಶಿಖಿಗಳೆಲ್ಲ ಕುಣಿಯುತಿರಲು
ನಗುತ ಬಂದ ಸೊಗಸಿನಿಂದ
ಲೋಕವನ್ನೆ ನಕ್ಕು ನಗಿಸಿ ಚೈತ್ರ ದೇವನು!
ಗಂಡ ಹೆಂಡಿರೊಟ್ಟುಗೂಡಿ
ಸೊಗಸು ಬನದ ಚೆಲುವ ಕಂಡು
ಪ್ರಕೃತಿ ಸಿರಿಗೆ ಬೆರಗುಗೊಂಡು
ಕಷ್ಟ, ದುಃಖಗಳನು ಮರೆತು
ಹರಿಸದಿಂದ ಬಂದರೊಟ್ಟು–ಚೆಲುವರು!

ಕೊಳದೊಳಿದ್ದ ತಾವರೆಗಳು ನಗಿಸಿ,
ನಲಿದು ನಕ್ಕು ಒಲಿದು ಬರುವ
ಝೇಂಕರಿಸುವ ಬವರ ದಂಡ ಬಳಿಗೆ ಕರೆದುವು!
ಬಿಸಿಲ ಜಳದಿ ಬಳಲಿದಂಥ
ಪಯಣಿಗರನು 'ನೀರು ಕುಡಿದು
ಮುಂದಕೈದಿರೆಂ'ದು ತಮ್ಮ
ಫಲವ ನೀಡಿ ಕಲ್ಪವೃಕ್ಷ ಬೇಡುತಿದ್ದವು!
ತುಂಬು ಫಲವ ನೀಡಿ ಮುಂದೆ
ಬಾಳೆ ಮರಗಳರ್ತಿಯಿಂದ
ಪಾಂಥರನ್ನು ಬಳಿಗೆ ಕರೆದುವು!
'ಹಣ್ಣ ತಿಂದು, ವಿಶ್ರಮಿಸುತ,
ಮುಂದೆ ನಡೆಯಿರೆ'ಂದು ಸನ್ನೆ-
ವಾತಿನಿಂದ ಪೇಳ್ದವು!
ನರಸಮೂಹ ನಲಿಯುತಿರಲು
ಭರದಿ ಬಂದ ಮೋದದಿಂದ
ಸುರಸಮಾನ ವಿಭವದಿಂದ
ಸರಸಗೊಳುತ ಚೈತ್ರ ದೇವನು!

ಸತ್ಪಥವ ನಿರ್ದೇಶಿಸೆನ್ನ ಜೀವನದಿ

ಬಾಳಿನಲಿ ಮುನ್ನಡೆಯಲಾರದತಿ ಬನ್ನದಿಂ
ಬಟ್ಟೆಯರಿಯದೆ ಬಳಲಿ ಬೆಂಡಾಗಿಹೆನು!
ದಿಟವೇನು? ಹುಸಿಯೇನು? ತಪ್ಪು ಸರಿಯಾವುದೆಂ-
ಬುದನರಿಯದಾಗಿಹೆನು ದೇವ!
ಕರುಣೆಗೊಂಡೆನಗಿಂದು ಸತ್ಪಥವ
ನಿರ್ದೇಶಿಸೆನ್ನ ಜೀವನದಿ.

ನೂರಾರು ತತ್ತ್ವಗಳು, ನೂರಾರು ಶಾಸ್ತ್ರಗಳು
ಸತ್ಯವೆನ್ನುವನೊಬ್ಬ, ಹುಸಿಯೆಂದು ಮತ್ತೊಬ್ಬ-
ರಿಂತೆಲ್ಲರೊಬ್ಬೊಬ್ಬರೊಂದೊಂದು ವಿಧದಿಂದ
ಸಾರುವರು ನೀತಿ ಶಾಸ್ತ್ರಗಳ!
ಅವರಿವರ ಮಾತ ಕೇಳುವ ಬದಲು
ನಿನ್ನಡಿಗೆ ಶರಣುಗೊಂಡಿಹೆನು!

ಬಾಳಮುಂಬಟ್ಟೆಯನು
ಕಾಲಧರ್ಮಗಳೆಂದು, ದುರ್ನೀತಿ ಹೊಸೆದಿಹುದು!
ನಾನೇನಗೆಯ್ಯಲಂದು?
ಧರ್ಮ ಶಿಕ್ಷಕ ವೃಂದ, ಧರ್ಮರಕ್ಷಕ ವೃಂದ-
ವೆಲ್ಲವೂ ಸತ್ಯ ಪರಮಾರ್ಥತೆಯ, ನೇಮ
ನಿಯಮುಗಳನರಿಯದೊಂದಿನಿಸು ಕೂಡ!

ಅಧಿಕಾರವೇ ನ್ಯಾಯ! ಐಶ್ವರ್ಯವೇ ನಿತ್ಯ-
ಶ್ರೀಮಂತರೇ ಸತ್ಯ, ನ್ಯಾಯಾಧಿಕಾರಿಗಳು!
ಧರ್ಮನೇಮಗಳಿಲ್ಲ ಶಾಸ್ತ್ರ ಬಂಧಗಳಿಲ್ಲ

ಐಸಿರಿಯು ಹೊರತು ಮಿಥ್ಯಾ
ಜಾತಿಮತ ಕಟ್ಟುಗಳ ಮಿಾರಿದರೆ,
ನರಕಲೋಕವ ಸೇರ್ವರಂತೆಲ್ಲ ಜನರುಗಳು!
ನೀತಿಯಿಲ್ಲದ ಜಾತಿ! ಧರ್ಮವಿಲ್ಲದ ಕರ್ಮ!
ಧ್ಯೇಯವಿಲ್ಲದ ವಿದ್ಯೆ! ನ್ಯಾಯವಿಲ್ಲದ ಬುದ್ಧಿ!
ಮರ್ಮವೇನೀ ಧರ್ಮ ಶಾಸ್ತ್ರಗಳ?
ಹೊಲೆತನಂ ಜಾತಿಯಲಿ, ನೀತಿಗಿಲ್ಲಂ ಬ್ರಹ್ಮಪದ!
ಗುಣಕರ್ಮಗಳಲ್ಲಿ ಚಂಡಾಲನುಂ ಜನಕಗ್ರ–
ಗಣ್ಯನಾಗಿಹನಯ್ಯ! ಧರ್ಮ ಶಾಸ್ತ್ರಗಳವನ ಕಾಪಾಡುತಿಹುವು!

ಒಂದೆ ತಾಯ್ನೆಲದಿಂದ ಹೊರಬಂದ ಬಂಧುಬಾಂಧವರೆಲ್ಲ
'ನಾಬೇರೆ,' 'ನೀಬೇರೆ' ಮತ ಬೇರೆ, ಜಾತಿ ಬೇರೆಂ–
ದೆನುತ ನೀತಿ ಸಾರುತಲಿಹರು!
ಮತದೊಂದೆ ಏಳಿಗೆಯ ಸ್ವಾರ್ಥತೆಯೊಳಿಹರು!
ಯೋಚಿಸುವೆನನುದಿನಂ! ಇದರ ಬಗೆಯೇನೆಂದು!
ದಿಟ ಹುಸಿಗಳಾವುದಿದರಲಿ ಎಂದು?
ದೇವನೀಂ ಕರುಣೆಗೊಂದೆನಗಿಂದು
ಸತ್ಪಥವ ನಿರ್ದೇಶಿಸೆನ್ನ ಜೀವನದಿ!

ದಿವ್ಯ ಸುಂದರಿಗೆ

ವಿಶ್ವಗರ್ಭದೊಳಡಗಿ ಸೃಷ್ಟಿರಾಶಿಯನಾಳ್ವ
ಸೂತ್ರ ಬಂಧವ ಪಿಡಿದ, ಹೇದಿವ್ಯ ಭಾಮಿನಿಯೆ!
ಸುಖಸ್ವಪ್ನ ಸುಂದರಿಯೆ! ಕೂರ್ಮೆಗೊಂಡೆನ್ನ ಬಳಿ-
ಗೈತಂದು ತಕ್ಕೈಸುತಪ್ಪುತಾಲಿಂಗಿಸುತೆ
ನಲ್ಮೆಯಿಂದೊಮ್ಮೆ ಚುಂಬಿಸು ನನ್ನ ಸೌಂದರ್ಯಮಯಿಯೇ.
ಹಗಲಿರುಳು ನಿನ್ನ ದರ್ಶನಕಾಗಿ ನಚ್ಚಿಸಿಂ-
ದರ್ಚಿಪೆನು ನಿನ್ನಮಲಭಾವನಾ ಮೂರ್ತಿಯ-
ನ್ನೆರ್ದೆದೇಗುಲದೊಳಿಟ್ಟು!

ಕಲ್ಪನಾತೀತ ಸುಖ ಸಂಗೀತ ಮಯಿಯಾಗಿ,
ಸೃಷ್ಟಿ ಸೊಬಗಿನ ಸೊಗಸು ಮೂರುತಿಯಾಗಿ
ಸುಗ್ಗಿಗಾಲದೊಳುಕ್ಕುವಾನಂದದಿಂ
ಕುಕಿಲುತಿಹ ಪಿಕಗಾನದೊಳ್ ತೋರಿ,
ವನ್ಯಮೂಲದೊಳೇಕ ಭಾವದೊಳನಂತಾನಂದ
ಮಯ ಸ್ವರೂಪನಡಿದಾವರೆಯೊಳೆರಗಿ
ಘೋಷಿಸುವ ದಿವ್ಯ ಶ್ರುತಿಗಾನಮಾಗಿ
ಮಾನುಷ್ಯ ಲೋಕದೊಡವೆರೆದು
ಪರಮ ಸುಖಸುಧಾಪಾನವಂ ಗೈವ
ಕಬ್ಬಿಗರ ಜಿಹ್ವೆಯೊಳ್ ನೆಲಸಿ-
ನವನವೋನ್ಮೇಷಶಾಲಿನಿಯಾಗಿ
ಮೆರೆವ, ನಿಯತಿಕೃತ ನಿಯಮ ರಹಿತಳ್
ಹೇ ಪ್ರಭಾ ಸುಂದರಿಯೆ! ಬಾರೆನ್ನ ಬಳಿಗೆ!

ಪಂಪರನ್ನಾದಿ ಕಬ್ಬಿಗರೊಳಗ್ಗಳರ
ಕಾವ್ಯ ವಾಣಿಯೊಳಾವ ಶಕ್ತಿಯುಲಿಯಿತು

ಕರಿನುಡಿಯ ವೈಮೆಯುಂ ಮೆರೆಸಿದೆಯೊ!
ಯೇಸು ಬುದ್ಧಾದಿ, ಮಾರ್ಗನಿರ್ದೇಶಕರ
ತತ್ವಸಾರದೊಳಾವ ಬಲ್ಮೆಯನಿರಿಸುತುಜ್ವಲ
ಧರ್ಮ ಸಂದೇಶವನು ಪಸರಿದೆಯೊ!
ಆ ದಿವ್ಯ ಶಕ್ತಿಯನೊಂದು ಸವಿಮುತ್ತಿ-
ನಧರಾಮೃತದೊಳೆನ್ನ ತುಟಿಯೊಳುಸುರುವಿ
ದಿವ್ಯ ಚೇತನವಿತ್ತು ಕೈ ಹಿಡಿದು ನಡೆಸೆನ್ನನು.

ಬಾ ಕೆಳದಿ ಬಾ

ಬಾರೆನ್ನ ಗೆಳತಿ ಬಾ, ಸುಖಪಡುವ ಬಾರೆ!
ಚೆಲುವಿನರಗಿಣಿ ಬಾರೆ, ಕುಸುಮ ಕೋಮಲೆ ಬಾರೆ ಬಳಿಗೆ!
'ಬಾಳಿನಲಿ ಸೊಗಸಿಲ್ಲ! ಚೆಲುವು ಹರಿಸಗಳಿಲ್ಲ!
ನಾಳೆ ಸಾಯುವ ದೇಹ! ಏಕಿಂತು ಸುಖ ಪಡಲಿ
ಕೆಳಸುವಿರಿ ನೀವೆ'ಂದು ಬೋಧಿಸುವ ಸಂನ್ಯಾಸಿ
ಹುಚ್ಚನಲ್ತೆ? ಕ್ಷಣವ ಕಳೆಯುವೆ ಏಕೆ?
ಓ ನಲ್ಲೆ ಜೀವನವು ಕಪ್ಪಾದೊಡೇನಾಯ್ತು?
ಕರಿ ಬಾಳು ಬಿಳಿಯಪ್ಪುದೆನ್ನ ಪ್ರೇಯಸಿಕೇಳೆ?
ದುಕ್ಕ ಬೇಸರವೆಲ್ಲ ಕೊಚ್ಚಿ ಪೋಪುದು ನಮ್ಮ
ಸುಖವಾಗಿ ನಿಯೊಳಿಂದು!
ಪಿಕವು ಕುಕಿಲು ತಲಿಹುದು ಶುಕವುಗಳಪುತಲಿಹುದು!
ಪ್ರಕೃತಿಯಲಿ ಚೆಲುವಿಹುದು, ಸೊಗಸು ತುಂಬಿಹುದು!
ನಿನ್ನೆ ಮೊನ್ನೆಯ, ಕಳೆದ ದಿನಗಳ ಜೀವನದ
ಕಹಿತನವ ನುಗುಳು ವೆನ್ನಯರನ್ನೆ — ಬಾರೆ ಬೇಗ!
ತಡವೇಕೆ ಸಿಂಗರಕೆ? ಚೆಲುವೆ ಸಿಂಗರ ವಲ್ತೆ?
ಪ್ರಕೃತಿ ಸೌಂದರ್ಯವನು ಕೃತ ಕತೆಯೊಳೂರಸಬೇಡಲೆ ಚೆನ್ನೆ
ಕಿಲ ಕಿಲನೆನಕ್ಕೊಂದು ನಲ್ನಗುವ ಬೀರಲದಕಿಂತ
ಚೆಲುವೇನು? ಸೊಗಸುವಾತುಗಳಿಂದ ಸಂತೈಸ
ಲದಕಿಂತ ಹೆಚ್ಚು ಸಿಂಗರವೇನು?-
ಬಾರೆನ್ನ ಗೆಳತಿ, ಬಾ, ಸುಖ ಪಡುವ ಬಾರೆ!
ಸುಖದಿ ಮುಳುಗುವೆವಿಲ್ಲ! ವಿಷಯದಲಿ
ಲೋಕವನೆ ಮರೆಯುವೆವು ನಾವೆಂದ ಹೆದರಿಕೆಯು
ಬೇಡವೊಂದಿನಿಸು ಕೂಡ ನಮಗೆ!
ಬಾಳಿನಲಿ ಸಮರಸತೆ ತಂದೊಡ್ಡಿ ಸುಖಕಷ್ಟ—
ಗಳನೊಂದೆ ದೃಷ್ಟಿಯಲಿ ಕಾಂಬೊಡದ ನುಳಿದ
ತತ್ವವಿನ್ನೇತರದೊ? ಸಂನ್ಯಾಸಿ ಪೇಳ್ವನೇನೊ?

ವಿ ರ ಹಿ

ಎಲ್ಲಿರುವೆ ಮನದನ್ನೆ ಬಾರಿಲ್ಲಿ ಬೇಗ!
ಎಲ್ಲ ಮರೆತಿಹೆ ಕನ್ನೆ — ನೀನೆನ್ನ ಬಿಟ್ಟು!
ಎನಿತು ಕಾಲಂ ಹೋಯ್ತು, ನಿನ್ನನಾ ಕಾಣಲಿಲ್ಲ!
ಬರಲಾರೆಯೇನೊಮ್ಮೆ ನಿನ್ನೊಲವಿನರಸನನು ಕಾಣಲೆಂದು?
ಹಗಲಿರುಳು ದಾರಿ ಕಾಯುತಲಿಹೆನು ಬರುವಿ ನೀನೆಂದು!
ದುಗುಡದಿಂ ಕುದಿಯುತಿಹ ಎನ್ನೆದೆಯ ತಣಿಸಲೆಂದು!
ಸೊಗಸು ವಸ್ತುಗಳನ್ನು ಕಂಡಾಗಲೆನ್ನೆರ್ದೆ
ದುಗುಡದಿಂದುಕ್ಕಿ ಕಂಬನಿಯಾಗಿ ಹೊರಹೊಮ್ಮುತಿಹುದು!
ನಿನ್ನ ರೂಪಂ ಕಂಡು, ನಿನ್ನ ಮೂರ್ತಿಯ ನೆನೆದು
ಹುಚ್ಚಾಗಿ ಕೂಗುತಿಹೆ 'ನಲ್ಲೆ ಬಾ ಬಳಿಗೆ'ಂದು
ಬನದೆಡೆಯೊಳಾವೋದದಿಂದ ರಾಗಂ ಬೆತ್ತು ಕೋಗಿಲೆಯು
ಹಾಡುತಿರೆ ನಿನ್ನ ನೆನಪಾಗುತಿಹುದು!
ಹರುಷದಿಂದೊಟ್ಟುಗೂಡುತ ಹಾರುವಿನೆವಕ್ಕಿಗಳ ಕಂಡು
ದುಃಖಿಸಿಹೆ, ಹಲವಾರು ಬಾರಿ!-ನಿನ್ನೊಡನೆ
ನಲಿನಲಿಯುತೊಟ್ಟು ವಿಹರಿಸಿದ ದಿನಗಳನು ನೆನೆದು!
ಸಂಜೆ ಸುಂದರವಿರಲು, ಗಂಧವಹ ತೀಡು ತಿರಲು
ಭಾವ ಲೋಕದೊಳೆನ್ನ ಹೃದಯ ಚರಿಸಿರಲು
ಸೊಗಸು ಮೂರುತಿ ನಿನ್ನ ರೂಪೆದುರು ನಿಂದಂತೆ ತೋರುತಿಹ
ಒಮ್ಮೊಮ್ಮೆ ಕಣ್ಣ ಕಟ್ಟಿದ ಪೋಲು,— ನೀನಾಗ ಸವನಿಳಿದು
ಬಂದೆನ್ನ ದೇಹವನ್ನಪ್ಪಿದಂತಾಗುವುದು!
ಹುಚ್ಚಾಗಿ, ಪೆಚ್ಚಾಗಿ, ಲೋಕವೆಲ್ಲವ ಮರೆತು
ಭಾವದಾ ವೇಗದಲಿ, ನಿನ್ನ ಕಲ್ಪಿತ ದೇಹವನ್ನಪ್ಪಿ ಮೈಮರೆವೆನು!
ಕ್ಷಣದೊಳೇ ಎಚ್ಚತ್ತು ಕನಸ ಕಂಡವನಂತೆ
ಹುಚ್ಚು ಹುಚ್ಚೇ ಆಡಿ, ಬಳಿಕೆನ್ನ ಮರುಳ್ತನವ
ನಾನೇ ಕಂಡು ನಾಚುತಿಹೆನು!

ಅಂಗಳ ದೊರಳಿರಲು ಮಲ್ಲಿಗೆಯು ನಗುನಗುತ
ನೀನಂದು ಮಲ್ಲಿಗೆಯ ಸೊಗಸಾಗಿ ಹೆಣೆದದಂ
ತಲೆಗಿಟ್ಟು, ನಕ್ಕು ನಲಿದೆನ್ನ ನಗಿಸಿದ ದಿನದ ಸವಿ ನೆನಪು
ಜೀವನದೊಳನುದಿನಂ ಹರಿಸವನು ಮರೆಸುತಿಹುದು!
ತಂಗದಿರ ನಾಗಸದೊಳೆಸೆದಿರಲು, ಸುತ್ತಲು
ಶಾಂತಮಯ ಮೌನ ಹಬ್ಬಿರಲಾನು ದುಃಖದಿಂ—
ದಾಗಸವ ನೋಡುತಿಹೆ, ತಾರೆಗಳೆ ಕಡೆಗೆ ನೀ—
ನೆಲ್ಲಿರುವೆ ಎಂದು?
ಎನ್ನ ಶೋಕವ ಕಂಡು, ಕರುಣೆಯಿಂದೈತಂದು
ಎನ್ನೆದೆಯ ಸಂತೈಸಲಾರೆಯೇಂ ನೀನು?
ಜೀವನಂ ದುಃಖಮಯ ಬಲು ನಿರಾಶಾಮಯಂ
ನೀನಿಲ್ಲ ದೀ ಬಾಳು ಶೂನ್ಯ.
ವಿಶ್ವನಗುತಿಹುದಂತೆ! ಬಾಳಿನಲಿ ಸೊಗಸು ತುಂಬಿಹುದಂತೆ!
ಎನ್ನೆರ್ದೆಯೇಕೊ ನಗು ಸೊಗಸುಗಳ ಕಾಣದಿಹುದು!
ಎನ್ನ ಕಂಗಳಿಗೆಲ್ಲ ಲೋಕಗಳು, ದುಃಖ ಶೋಕಗಳನ್ನೆ-
ತೋರುತಿಹವು!
ಎನ್ನ ಬಾಳಿನೊಳಿಲ್ಲ ಜೀವನೋತ್ಸಾಹ; ಜೀವನಂ
ನೀರಸವು, ಬಲು ದುಃಖ ಮಯವು!
ಎನ್ನ ಲೇಖನಕಿಲ್ಲ ವಾಗ್ದೇವಿ ಕರುಣಿಸಿಹ ದಿವ್ಯ ಶಕ್ತಿ.
ಬಾಳೊಳೇನುಂ ಬೇಡ, ಸುಖಮಯಂ! - ಜೀವನ ವಿರಕ್ತಿ!
ಎನ್ನ ಗೋಳ್ ಕೇಳಿಸದೆ, ಎನ್ನ ಬೆಸನಂ ಕಾಣದೇನು?
ಓ ನಲ್ಲೆ! ಬಾರೆನ್ನ ಪ್ರೇಯಸಿಯೆ!
ನೀರೆ ಸಂಜೀವನದಿ ನೀಡು ಸ್ವಾರಸ್ಯವನ್ನೂ.

ನನ್ನ ಕಥೆ

ಹುಟ್ಟಿದುದು ಎಲ್ಲಿ ಮೂಲೆಯೊಳಾದರೇನಾಯ್ತು?
ಕಂನಾಡಿನೊಂದು ಕಡೆ ಹುಟ್ಟಿದೆನು!
ಬಡತನಂ ಬೆಂಬತ್ತಿ ಬಂದಿದ್ದರೂ ಕೂಡ
ಸೊಗಸು ತಾಯ್ತಂದೆಗಳ ಪಡೆದಿಹೆನು!
ಅಪ್ಪನಿಗೆ ಹರಯ ತುಂಬುವ ಮೊದಲೆ, ಐಸಿರಿಯು
ಯಾರಿಗೋ ಮಾರಿ ಹೋಗಿತ್ತಂತೆ!
ಚಿಕ್ಕಂದಿಸಿಂದಲೂ ಬಡತನದ ಬನ್ನಗಳ-
ನನುಭವಿಸಿ ಬಂದಿಹೆಸಿಲ್ಲ ಚಿಂತೆ!
ಬಡತನದಿ, ಕಷ್ಟವನು ಸೈಸಲಾರದೆ, ತಂದೆ
ಹಿಂದೆ,--ಊರು ಬಿಡಲನುವಾದರಂತೆ!
ಹುಟ್ಟೂರ ಬಿಟ್ಟು ಮತ್ತೆಲ್ಲಿಗೂ ಹೋಗಲಿಕೆ
ಮನಬಾರದವರು ಹಿಂದೈತಂದರಂತೆ!
ಐದು ಮಕ್ಕಳು ನಾವು! ಹೆಣ್ಣೊಬ್ಬಳೇ ಅಕ್ಕ
ನಗುನಗುತ ಬಡತನವನಿದಿರಿಸಿದೆವು!
ದಿವ್ಯಶಕ್ತಿಯದೊಂದು—ದಯೆಯು ನಮ್ಮಲ್ಲಿರಲು
ಸುಖವಾಗಿಯೇ ಬಾಳ ಸಾಗಿಸಿದೆವು!
ತಂದೆಯ ಮೃತವಾಣಿ, ಕಷ್ಟಗಳನೆಲ್ಲವನು
ತಾಳ್ಮೆಯಿಂ ಸಹಿಪುದಕೆ ಬಲ್ಮೆಯಿತ್ತಿಹುದು!
ಚಿತ್ರಮಯ ಬಾಳಿನಲಿ ಧರ್ಮ ಸಂಶಯವಿರಲು
ಸರಿ ದಾರಿಯಲ್ಲಿ ತೆರಳೆ--ದಾರಿತೋರಿಪುದು!
ಯೋಚಿಸುವೆನೀಗಲೂ, ಬಿದಯ ಮಾಟವಿದೊಂದು!
ನಾನೆಲ್ಲೊ?—ಏನಾಗಿ ಹೋಗಿಹೆನು?
ಎಲ್ಲಿಯೋ ಹಳ್ಳಿಗಾಡಿನ ಮೂಲೆಯೊಂದು ಕಡೆ
ಬಡತನದಿ ಬಳಲುವವನಿಲ್ಲಿ ಬಂದಿಹೆನು!
ನಿನ್ನೆ ಮೊನ್ನೆಯ ಮೋಲೆ, ಬಡತನಂ ಬಿಟ್ಟಿಲ್ಲ!

ಆದರೂ ಬಾಳ್ವೆ ಸುಖಗೊಂಡೆ ಸಾಗಿದುದು!
ಕಲ್ಪನೆಯ ಕನಸಿನೊಳು, ಕಾಣಲಾರದ ಸೊಗಸು!
ಲೇಸಾಗಿ, ಬಾಳಿನೊಡನೇಕೊ ಬಂದಿಹುದು!
ಕುಣಿಯುತಿಹೆ ಹುಚ್ಚಾಗಿ, ಹುಚ್ಚಿಣಿಕೆ ಹೆಚ್ಚಾಗಿ,
ಬಾಳ್ವೆ ಬಂಧುರವಹಹ! ಎಳೆಯ ಬಾಳ್ವೆ!
ವಿದ್ಯಾರ್ಥಿಯಾಗಿ ಬಾಳುವ ಕಾಲ, ವಿಧವಿಧದ
ಗೆಳೆಯರೊಡನಾಡುತಿಹೆ, ಸೊಗಸನೋಳ್ವೆ!
ನರಜನ್ಮ ಹಾಳಂತೆ! ಸುಖವೆಂಬುದಿಲ್ಲಂತೆ!
ಸಂಸಾರ ಸಾಗರವ ದಾಟಲರಿದಂತೆ!
ಬಂಧುಬಳಗದ ಬೇನೆ, ದುಃಖ ಸಂಕಷ್ಟಗಳು
ಬಾಳಿನಲಿ ದುಃಖವನೆ ತರುತಿರುವವಂತೆ!
ಎಂತಾದರೇನಾಯ್ತು? ನಾಳೆಬರಲಿಹ ದುಃಖ—
ಕಿಂದೆ ನಗುವನು ಬಿಟ್ಟು—ಅಳಲಬೇಕೇನು?
ನಾಳೆ ಬರಲಿಹುದೇನೊ! ದಿಟವ ಬಲ್ಲವರಾರು?
ಇಂದು ನಗುತಿಹೆನಾನು! — ವಾಯುವೇಗಕು ಮಿಾರಿ,
ಹದಿನೆಂಟು ಮಳೆಗಾಲ ಮಾಸಿ ಹೋಯ್ತು!
ನಿನ್ನೆ ಕುಣಿಯುತಲಿದ್ದೆ ನೆಲದಿ ಕೆಂಧೂಳಿಯಲಿ
ಕನವರಿಸುತಿಹೆನಿಂದು! ಮುಂದೆ ಬಂದು!
ಕನಸು ಕಟ್ಟುವ ಕಾಲ — ಭಾವನಾಮಯ ಸಮಯ!
ನವ ತರುಣತೆಯ ಕಾಲ, ಎನಿತು ಬಂಧುರವು!
ವಿಷ ತುಂಬಿ ಭೋರ್ಗರೆದೊಡೇನಂತೆ! ನಾಳೆನಾ
ಸತ್ತರೂ ಮನಕೆ ತೋರುವುದಿಲ್ಲ ಸಾವು!
ವಿಶ್ವ ವಿದ್ಯಾಲಯದಿ ಪಠಿಸುತಿಹೆ, ವಿಜ್ಞಾನ,
ಗಣಿತಗಳ ಕೊಂಡು ಮೊದಲ ವರ್ಷದಲಿ,
ಮನಸು ಬೇಸರಿಸುತಿದೆ,—ಮಾನವನ ಯಂತ್ರಕ್ಕೆ
ಹೋಲಿಸುವ ವಿಜ್ಞಾನ ಗಣಿತ ಶಾಸ್ತ್ರ!
ಮಾನವೀಯತೆಯನ್ನು ತಿಳಿಸದಂತಹ ಶಾಸ್ತ್ರ!

ಎಷ್ಟು ಚೆನ್ನಾಗಿದ್ದರೇನಾಯ್ತು? ವ್ಯರ್ಥ
ಮನಸಿಗಭಿರುಚಿಯಿಲ್ಲ—ಪಾಸಾಗುವೊಂದೆಕಾ—
ರಣದಿಂದ ಕಲಿಯುತಿಹೆ, ಸಾರ್ಥಕತೆಯುಂಟೆ?
ಗೆಳೆಯ ಮುಸ್ಲಿಮರೊಡನೆ, ಜಾತಿಭೇದವ ಮರೆತು
ಬಾಂಧವ್ಯತನದಿಂದ ನಲಿಯುವೆವು ಹಾರಿ!
ಬೇರೆ ಬೇರೆಡೆಯಿಂದ—ವಿಧವಿಧದ ವಿದ್ಯಾರ್ಥಿ
ಗಳು ಕೂಡಿ, ಆಡುವೆವು ಸಂತಸವ ತೋರಿ!
ಭಾವನೆಗಳಿಂದ ಮನತುಂಬಿರಲು, ಹೃದಯ ಸಂ—
ತೃಪ್ತಿಗೀ ಕವನಗಳ ಬರೆದಿಹೆನು!
ಸರಿ, ತಪ್ಪುಗಳನರಿಯೆ! —ಸರಿಯಲ್ಲದಿದ್ದರೂ
ನಾನಾತ್ಮ ಸಂತೃಪ್ತಿ ಹೊಂದಿಹೆನು!

ಹರಾಜಿಗಾಗಿ